# ಹುಚ್ಚು ಕುನ್ನಿ ಮನವೇ ನೀ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 612.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 239.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 63.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 243.
5. **Note:** Lyrics given here are as in Ref. 1. The wordings in Ref. 2 are same as in Ref. 1. The wordings in Ref. 3 are slightly different and are given separately. The wordings in Ref. 4 are same as in Ref. 3.
6. **Note:** Singer has followed lyrics as in Ref. 1.

ರಾಗ: ಶಂಕರಾಭರಣ ತಾಳ: ಆದಿ

ಹುಚ್ಚು ಕುನ್ನಿ ಮನವೇ ನೀ,
ಹುಚ್ಚುಗೊಂಬುದು ಘನವೇ
ಕಚ್ಚುಕದನತನವ ಬಿಟ್ಟು,
ಅಚ್ಯುತನ ಪಾದ ಮುಟ್ಟು || ಪ ||

ಸ್ನಾನ ಮಾಡಿದರೇನು, ಸಂ-
ಧ್ಯಾನ ಮಾಡಿದರೇನು
ಹೀನತನವ ಬಿಡಲಿಲ್ಲ ನೀ,
ಸ್ವಾನುಭವವ ಕೂಡಲಿಲ್ಲ || 1 ||

ಜಪ ಮಾಡಿದರೇನು ನೀ,
ತಪ ಮಾಡಿದರೇನು
ಕಪಟ ಕಲ್ಮಷ ಕಳೆಯಲಿಲ್ಲ,

ನಿಪುಣತನ ಪಡೆಯಲಿಲ್ಲ     || 2 ||

ಮೂಗು ಪಿಡಿದರೇನು ನೀ,

ಮುಸುಕನಿಕ್ಕಿದರೇನು

ಭೋಗಿಶಯನನ ಭಜಿಸಲಿಲ್ಲ,

ಬೇಗ ಪೂಜೆ ಮಾಡಲಿಲ್ಲ     || 3 ||

ಗುರುವು ನೀನಾದಡೇನು, ಅತಿ-

ಗರುವನಾದಡೇನು

ಗುರುಮಹಿಮೆ ತಿಳಿಯಲಿಲ್ಲ

ಗುರೂಪದೇಶವ ಪಡೆಯಲಿಲ್ಲ     || 4 ||

ಹೋಮ ಮಾಡಿದರೇನು ನೀ,

ನೇಮ ಮಾಡಿದರೇನು

ರಾಮನಾಮ ಸ್ಮರಿಸಲಿಲ್ಲ,

ಧಾಮಪಥವ ಹಿಡಿಯಲಿಲ್ಲ     || 5 ||

ನವರಂಧ್ರಗಳ ಕಟ್ಟು ನೀ,

ನಡೆವ ದಾರಿ ಮುಟ್ಟು

ಕವಿದ ಕಾಮ ಕ್ರೋಧಗಳಟ್ಟು,

ರವಿಮಂಡಲ ಮುಟ್ಟು     || 6 ||

ಏನು ಮಾಡಿದರೇನು ನೀ-

ನೆಂತು ಮಾಡಿದರೇನು

ಜ್ಞಾನದಿಂದ ಪುರಂದರವಿಠಲನ,

ಧ್ಯಾನಿಸಲಿಲ್ಲ ಮನವೇ     || 7 ||

**Note:** The lyrics given below are as per Ref. 3 and Ref. 4.

ರಾಗ: ಹಂಸಧ್ವನಿ     ತಾಳ: ರೂಪಕ

ಹುಚ್ಚುಕುನ್ನಿ ಮನವೇ ನೀ

ಹುಚ್ಚುಗೊಂಬುದು ಘನವೇ     ॥ ಪ ॥

ಕಚ್ಚುಕದನತನವ ಬಿಟ್ಟು
ಅಚ್ಯುತನ ಪದವ ಮುಟ್ಟು     ॥ ಅಪ ॥

ಸ್ನಾನ ಮಾಡಿದರೇನು, ಸಂ-
ಧ್ಯಾನವ ಮಾಡಿದರೇನು
ಹೀನತನವ ಬಿಡಲಿಲ್ಲ
ಸ್ವಾನುಭಾವ ಕೂಡಲಿಲ್ಲ     ॥ 1 ॥

ಜಪವ ಮಾಡಿದರೇನು, ನೀ-
ತಪವ ಮಾಡಿದರೇನು
ಕಪಟ ಕಲ್ಮಷ ಕಳೆಯಲಿಲ್ಲ
ಕಾಮಿತಾರ್ಥಪಡೆಯಲಿಲ್ಲ     ॥ 2 ॥

ಮೂಗು ಹಿಡಿದರೇನು, ನೀ
ಮುಸುಕನಿಕ್ಕಿದರೇನು
ಭೋಗಿಶಯನು ವರ್ತಿಸಲಿಲ್ಲ
ದೇವಪೂಜೆ ಮಾಡಲಿಲ್ಲ     ॥ 3 ॥

ಗರುವನಾದರೇನು, ನೀ
ಗೊರವನಾದರೇನು
ಗುರುವಿನ ಸ್ವಾಮ್ಯವ ತಿಳಿಯಲಿಲ್ಲ
ಗುರುವುಪದೇಶ ಪಡೆಯಲಿಲ್ಲ     ॥ 4 ॥

ಹೋಮ ಮಾಡಿದರೇನು, ನೀ
ನೇಮವ ಮಾಡಿದರೇನು
ರಾಮನಾಮ ಸ್ಮರಿಸಲಿಲ್ಲ
ಮುಕುತಿ ಪಥವ ಪಡೆಯಲಿಲ್ಲ     ॥ 5 ॥

ನವದ್ವಾರವ ಕಟ್ಟು, ನೀ
ನಡುವಣ ಹಾದಿಯ ಮುಟ್ಟು

ಅವಗುಣಗಳ ಬಿಟ್ಟು ಭಾನು
ಮಂಡಲ ಮನೆಯ ಮುಟ್ಟು ॥ 6 ॥

ಏನು ನೋಡಿದರೇನು ನೀ-
ನೇನ ಮಾಡಿದರೇನು
ಧ್ಯಾನವನ್ನು ಮಾಡಲಿಲ್ಲ
ಪುರಂದರವಿಠಲನ ಸ್ಮರಿಸಲಿಲ್ಲ ॥ 7 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಅವಿವೇಕಿಯಾದ ಮನಸ್ಸನ್ನು ಕುರಿತು ದಾಸರು ಈ ಹಾಡಿನಲ್ಲಿ ರಚಿಸಿರಬಹುದು.
ಮನಸ್ಸು ದೈವವೆಂಬ ಬಲವಾದ ನೆಲೆಯನ್ನು ಆಶ್ರಯಿಸದೆ ಹುಚ್ಚುಹುಚ್ಚಾಗಿ ಬಾಹ್ಯ ಪ್ರದರ್ಶನಗಳಿಗೆ ಮಾರುಹೋದರೆ ಏನು ಹೇಳಲಾದೀತು? ಸ್ನಾನ, ಧ್ಯಾನ, ಜಪ, ತಪ, ನದಿಯ ತೀರದಲ್ಲಿ ಮೂಗು ಹಿಡಿದು ಮುಸುಕುಹಾಕಿ ಮಾಡುವ ವ್ರತಾಚಾರ ಇವುಗಳ ಹಿನ್ನೆಲೆಯಲ್ಲಿ ವ್ಯಕ್ತಿಯ ಪ್ರಚಾರಪ್ರಿಯತೆ ಎದ್ದು ಕಾಣುತ್ತದೆ.

**ಕಚ್ಚುಕದತನ** – ಚಾಂಚಲ್ಯ, ವಿರೋಧ.

**ನಿಪುಣತನ** – ಸಂಸಾರವನ್ನು ದಾಟುವ ಜಾಣತನ ('ನೈಪುಣ್ಯಂ ಭವಾಬ್ಧಿತರಣೇ' ಎಂಬ ಮಾತಿನ ಛಾಯೆ).

**ಮುಸುಕನಿಕ್ಕಿದರೇನು** – ಜಪ ಮಾಡುವಾಗ ಹಾಕಿಕೊಳ್ಳುವ ಮುಸುಕು.

**ಬೇಗೆ ಕಳೆಯದೆ** – ದುಗುಡವನ್ನು ಒತ್ತಟ್ಟಿಗಿಟ್ಟು.

**ನವರಂಧ್ರ** – ದೇಹದ ನವದ್ವಾರಗಳು.

**ಧಾಮ ಪಥ** – ಮೋಕ್ಷದ ಮಾರ್ಗ; ಭಕ್ತಿ.

**ರವಿಮಂಡಲ** – ಸೂರ್ಯಮಂಡಲಸ್ಥನಾದ ನಾರಾಯಣ.

**ಕಲ್ಮಷ** = ಕೊಳೆ

**ಕಾಮಿತಾರ್ಥ** = ಮೋಕ್ಷ

**ವರ್ತಿಸು** = ಅನುಸರಿಸು

**ಸ್ವಾಮ್ಯ** = ಅಧಿಕಾರ

**ಭಾನುಮಂಡಲ ಮನೆಯ ಮುಟ್ಟು** = ಮೋಕ್ಷ ದೊರಕಿಸು

**Classification:** Keerthane
**Ankita:** purandara vittala
**Location:** NA
**Category:** Loka Neeti, Jeevana Sambodhane
**Sub-Category:** huchhu, nayi, achyuta, snana, Dhyana, bhava, japa, tapa, mosa, moogu**,** bhajane, upadesha, homa, rama, vaikunta, moksha, mukti, dari, jnana, smarane,
**Pravachana:** NA
**Explanation:** NA